# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1161** |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕಾಂತರಾಜ್ (ಬಿಎಂಎಲ್) - (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17.03.2020 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರ ಅನ್ನಭಾಗ್ಯ ಯೋಜನೆ ಜಾರಿಗೆಗೊಳಿಸಿದ ಬಳಿಕ ಆಹಾರ ಭದ್ರತಾ ಕಾಯ್ದೆ ಅನುಷ್ಠಾನವಾಗಿರುವುದರಿಂದ ಕಳೆದ 3 ವರ್ಷಗಳಿಂದ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿರುವ ಅನುದಾನವೆಷ್ಟು; (ವಿವರ ನೀಡುವುದು) | ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಒದಗಿಸಲಾಗುತ್ತಿಲ್ಲ.<br><br>ಕೇಂದ್ರ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಪ್ರತಿ ಕೆ.ಜಿ.ಗೆ ರೂ.3/-ರ ದರದಲ್ಲಿ ಪ್ರತಿ ಮಾಹೆಗೆ 217403ಮೆ.ಟನ್ ಅಕ್ಕಿಯನ್ನು ಒದಗಿಸುತ್ತಿದೆ ಹಾಗೂ ಸದರಿ ಅಕ್ಕಿಯ ಸಾಗಾಣಿಕೆಗೆ ಪ್ರತಿ ಕ್ವಿಂಟಾಲ್‌ಗೆ ರೂ.65 ಮತ್ತು ನ್ಯಾಯಬೆಲೆ ಅಂಗಡಿಗೆ ನೀಡುವ ಚಿಲ್ಲರೆ ಲಾಭಾಂಶದ ರೂ.87ರಲ್ಲಿ ಶೇ.50 ರಷ್ಟು ಅನುಧಾನವನ್ನು ನೀಡುತ್ತಿದೆ. |
| (ಆ) | ಕೇಂದ್ರ ಸರ್ಕಾರದ ಅನುದಾನದ ಜೊತೆಗೆ ರಾಜ್ಯ ಸರ್ಕಾರ ಎಷ್ಟು ಅನುದಾನ ಸೇರಿಸಿ ಅನ್ನಭಾಗ್ಯ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ; | ರಾಜ್ಯ ಸರ್ಕಾರದಿಂದ ಅನ್ನಭಾಗ್ಯ ಯೋಜನೆಗೆ 2019-20ನೇ ಸಾಲಿನಲ್ಲಿ 3859.67 ಕೋಟಿಗಳ ಅನುದಾನವನ್ನು ನೀಡಲಾಗಿದೆ. |
| (ಇ) | ಕೇಂದ್ರ ಸರ್ಕಾರದಿಂದ ಬರುತ್ತಿರುವ ಅನುದಾನದಿಂದ ರಾಜ್ಯ ಸರ್ಕಾರದ ಬೊಕ್ಕಸದ ಮೇಲೆ ಎಷ್ಟು ಹೊರೆ ತಗ್ಗಿದೆ; (ವಿವರ ನೀಡುವುದು) | ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಒದಗಿಸಲಾಗುತ್ತಿಲ್ಲ.<br><br>ಕೇಂದ್ರ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಪ್ರತಿ ಕೆ.ಜಿ.ಗೆ ರೂ.3/-ರ ದರದಲ್ಲಿ ಪ್ರತಿ ಮಾಹೆಗೆ 217403ಮೆ.ಟನ್ ಅಕ್ಕಿಯನ್ನು ಒದಗಿಸುತ್ತಿದೆ ಹಾಗೂ ಸದರಿ ಅಕ್ಕಿಯ ಸಾಗಾಣಿಕೆಗೆ ಪ್ರತಿ ಕ್ವಿಂಟಾಲ್‌ಗೆ ರೂ.65 ಮತ್ತು ನ್ಯಾಯಬೆಲೆ ಅಂಗಡಿಗೆ ನೀಡುವ ಚಿಲ್ಲರೆ ಲಾಭಾಂಶದ ರೂ.87ರಲ್ಲಿ ಶೇ.50 ರಷ್ಟು ಅನುದಾನವನ್ನು ನೀಡುತ್ತಿದೆ. |
| (ಈ) | ಅನ್ನಭಾಗ್ಯ ಯೋಜನೆಯಡಿ ಅಕ್ಕಿಯನ್ನು ಯಾವ ರಾಜ್ಯದಿಂದ ತರಿಸಲಾಗುತ್ತಿದೆ; ಈ ಅಕ್ಕಿಯ ದರವೆಷ್ಟು; ಸಾಗಾಣಿಕೆ ಇತರ ವೆಚ್ಚವೆಷ್ಟು; (ವಿವರ ನೀಡುವುದು) | ಅನ್ನಭಾಗ್ಯ ಯೋಜನೆಗೆ ಹೊರ ರಾಜ್ಯಗಳಿಂದ ಅಕ್ಕಿಯನ್ನು ಖರೀದಿಸಲಾಗುತ್ತಿಲ್ಲ. |

...2

| | | |
|---|---|---|
| (ಉ) | ಹೊರ ರಾಜ್ಯದಿಂದ ತರಿಸುವ ಅಕ್ಕಿಯನ್ನು ಸಾಗಾಣಿಕೆ ಮಾಡಲು ಯಾವ ಮಾನದಂಡವನ್ನು ಅನುಸರಿಸಿ ಸಾಗಾಣಿಕೆಗಾಗಿ ವಹಿಸಿಕೊಡಲಾಗಿದೆ; ಹಾಗೂ ಅಕ್ಕಿಯನ್ನು ಹಾಲಿ ಸಾಗಾಣಿಕೆ ಮಾಡುತ್ತಿರುವ ಕಂಪನಿ ಏಜೆನ್ಸಿ ಯಾವುದು; | ಹೊರ ರಾಜ್ಯಗಳಿಂದ ಅಕ್ಕಿಯನ್ನು ಖರೀದಿಸಲಾಗುತ್ತಿಲ್ಲ. |
| (ಊ) | ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆಗೆ ಸಂಗ್ರಹಿಸುತ್ತಿರುವ ಲೆವಿ ಪ್ರಮಾಣದ ಅಕ್ಕಿಯನ್ನು ಯಾವ ದರದಲ್ಲಿ ಖರೀದಿಸಲಾಗುತ್ತಿದೆ; ಸಂಗ್ರಹಿಸಿದ ಈ ಅಕ್ಕಿಯು ಎಷ್ಟು ತಿಂಗಳಿಗೆ ಸಾಕಾಗುತ್ತದೆ? (ವಿವರವಾದ ಮಾಹಿತಿ ನೀಡುವುದು) | ರಾಜ್ಯದಲ್ಲಿ ಲೆವಿ ಪದ್ಧತಿ ಜಾರಿಯಲ್ಲಿ ಇರುವುದಿಲ್ಲ. |

**ಸಂಖ್ಯೆ:** ಆನಾಸ 15 ಎಫ್‌ಪಿಪಿ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರು.